(ಇಂದು ದಿನಾಂಕ 20.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ:- ವಾದಿ ಪರ ವಕೀಲರಿಂದ:-**

ನನ್ನ ಮುಖ್ಯ ವಿಚಾರಣೆಯನ್ನು ಶಪಥ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿನ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಶಪಥ ಪತ್ರದಲ್ಲಿನ ಅಂಶಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ.

ನಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿದ್ದು ನಿಪಿ 1 ಎಂದು, ಪಹಣಿ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ 2 ಎಂದು, ಮ್ಯುಟೇಶನ್ ರಿಜಿಸ್ಟರ್ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ 3 ಎಂದು, ಸಾಗುವಳಿ ಚೀಟಿ ವಿತರಣಾ ಪುಸ್ತಕದ ಧೃಢೀಕೃತ ನಕಲನ್ನು ನಿಪಿ 4 ಎಂದು, ತೆರಿಗೆ ನಿರ್ಧರಣಾ ಪಟ್ಟಿಯನ್ನು ನಿಪಿ 5 ಎಂದು, ನಮೂನೆ 15 ನ್ನು ನಿಪಿ 6 ಎಂದು, ಮಂಜೂರಾತಿ ಪತ್ರದ ಧೃಢೀಕೃತ ನಕಲನ್ನು ನಿಪಿ 7 ಎಂದು, ನನ್ನ ಹಾಗೂ ಅವರ ಸಹೋದರರ ನಡುವೆ ಆದ ವಿಭಾಗ ಪತ್ರದ ಧೃಢೀಕೃತ ನಕಲನ್ನು ನಿಪಿ 8 ಎಂದು, ಅಡಮಾನಪತ್ರವನ್ನು ಹಾಜರುಪಡಿಸಿದ್ದು ನಿಪಿ 9 ಎಂದು, 3 ಪಹಣಿ ಪ್ರತಿಗಳನ್ನು ಹಾಜರುಪಡಿಸಿದ್ದು ನಿಪಿ 10 ರಿಂದ 12 ಎಂದು, ನಮೂನೆ 15 ನ್ನು ಹಾಜರುಪಡಿಸಿದ್ದು ನಿಪಿ 13 ಎಂದು, ನನ್ನ ಆಧಾರ ಕಾರ್ಡ್‌ನ್ನು ಹಾಜರುಪಡಿಸಿದ್ದು ನಿಪಿ 14 ಎಂದು, ಮತದಾರರ ಪಟ್ಟಿಯನ್ನು ನಿಪಿ 15 ಎಂದು, 9 ಗಣಕೀಕೃತ ಪಹಣಿ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 16 ರಿಂದ 24 ಎಂದು, ನನ್ನ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ 25 ಎಂದು, ನನ್ನ ತಂದೆಯ ಮರಣ ಪ್ರಮಾಣಪತ್ರವನ್ನು ನಿಪಿ 26 ಎಂದು, ಅಸಲು ದಾವೇ ಸಂಖ್ಯೆ 332/2014 ರ ಆದೇಶ ಪುಟದ ಧೃಢೀಕೃತ ನಕಲನ್ನು ನಿಪಿ 27 ಎಂದು, ನನ್ನ ಚುನಾವಣಾ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ನಿಪಿ 28 ಎಂದು ಗುರುತಿಸಲಾಯಿತು.

**(ವಾಟೀ ಸವಾಲಿಗೆ ಸಮಯಾವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.